7) ರಾಜ್ಯದಲ್ಲಿರುವ ನ್ಯಾಯಬೆಲೆ ಅಂಗಡಿವಾರು ಹಂಚಿಕೆಯನ್ನು ಕೇಂದ್ರೀಕೃತಗೊಳಿಸಿದ್ದು, ಕೇಂದ್ರ ಕಛೇರಿಯಿಂದಲೇ ಆನ್‌ಲೈನ್ ಮೂಲಕ ಹಂಚಿಕೆಯನ್ನು ನೀಡಲಾಗುತ್ತಿದೆ. ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ನ್ಯಾಯಬೆಲೆ ಅಂಗಡಿ ಮಟ್ಟದ ಆನ್‌ಲೈನ್ ಹಂಚಿಕೆಯು ಲಭ್ಯವಾಗುತ್ತದೆ.

8) ನ್ಯಾಯಬೆಲೆ ಅಂಗಡಿಗಳಿಗೆ ಆಯಾ ತಿಂಗಳಿಗೆ ಅಗತ್ಯವಿರುವ ಆಹಾರಧಾನ್ಯಗಳನ್ನು ಸಂಬಂಧಿಸಿದ ಸಗಟು ಮಾರಾಟ ಮಳಿಗೆಗಳಿಂದ ಹಿಂದಿನ ತಿಂಗಳ ಅಂತ್ಯದಲ್ಲೇ ಪೂರೈಸಲಾಗುವುದು.

9) ನ್ಯಾಯಬೆಲೆ ಅಂಗಡಿವಾರು ಪ್ರತಿ ಪಡಿತರ ಚೀಟಿದಾರರವಾರು ಪಡಿತರ ಪದಾರ್ಥ ಹಂಚಿಕೆ ತ:ಖ್ತೆಯನ್ನು ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ನೀಡಲಾಗಿದೆ. ಪಡಿತರ ವಿತರಿಸಿದ ಬಗ್ಗೆ ಪಡಿತರ ಚೀಟಿದಾರರ ಸಹಿ ಪಡೆಯಲು ತ:ಖ್ತೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

857(363); ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ)

ಅ) ರಾಜ್ಯದಲ್ಲಿ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಗಳ ವಿತರಣೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪಡಿತರ ಚೀಟಿಗಳ ವಿತರಣೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮತ್ತು ಕಂದಾಯ ಇಲಾಖೆಯ ನೌಕರರುಗಳನ್ನು ನಿಯೋಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಎರಡು ಇಲಾಖೆಯ ನೌಕರರುಗಳಲ್ಲಿ ಸಮನ್ವಯತೆ ಕೊರತೆಯಿಂದಾಗಿ ಪಡಿತರ ಚೀಟಿಗಳ ವಿತರಣೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಈ ಎರಡು ಇಲಾಖೆಗಳ ನೌಕರರುಗಳಲ್ಲಿ ಸಮನ್ವಯತೆಯನ್ನು ತ್ವರಿತವಾಗಿ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ಪಡಿತರ ಚೀಟಿ ಕೋರಿ ಬಂದಿರುವ ಅರ್ಜಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. ಈ ಪರಿಶೀಲನಾ ಕಾರ್ಯ ಮುಗಿದ ನಂತರ ಶೀಘ್ರವಾಗಿ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಆ) ಸರ್ಕಾರದ ದಿನಾಂಕ: 21.09.2013ರ ಆದೇಶದಲ್ಲಿ ಆಹಾರ ಇಲಾಖೆಯಲ್ಲಿ ಪಡಿತರ ಚೀಟಿ ಕೋರಿ ಬಂದಿರುವ ಅರ್ಜಿಗಳನ್ನು ತಪಾಸಣೆ / ಪರಿಶೀಲನೆ ನಡೆಸುವ ಸಲುವಾಗಿ ಕಂದಾಯ / ಗ್ರಾಮೀಣಾಭಿವೃದ್ಧಿ / ನಗರಾಭಿವೃದ್ಧಿ ಇಲಾಖೆಯ ಅಧಿಕಾರಗಳನ್ನೊಳಗೊಂಡು ನ್ಯಾಯಬೆಲೆ ಅಂಗಡಿ ಮಟ್ಟದ ಅಧಿಕಾರಿ (Fair Price Shop Level Officer-FLO) ಗಳನ್ನು ನೇಮಿಸಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.

ಇ) ಕಂದಾಯ ಮತ್ತು ಆಹಾರ ಇಲಾಖೆ ನೌಕರರುಗಳಲ್ಲಿ ಸಮನ್ವಯತೆಯ ಕೊರತೆ ಇರುವುದಿಲ್ಲ.

ಈ) ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ದಿನಾಂಕ: 15.02.2014 ರೊಳಗಾಗಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.